# 9

# “ಒಂಭತ್ತು ಜನರು – ಅವರೆಲ್ಲಿದ್ದಾರೆ?”

## (ಲೂಕ 17:11-19)

ಕೃತಜ್ಞತೆಯುಳ್ಳವರಾಗಿರುವುದು ನಮ್ಮ ದೈನಂದಿನ ಅಗತ್ಯಗಳಲ್ಲಿ ಒಂದು. ನಾವು ಬಹಳವಾಗಿ ಆಶೀರ್ವದಿಸಲ್ಪಟ್ಟಿದ್ದೇವೆ, ಆದರೆ ನಮ್ಮ ಆಶೀರ್ವಾದಗಳು ತಮ್ಮಷ್ಟಕ್ಕೆ ತಾವೇ ಬಂದಿವೆಯೆಂದು ತಿಳಿಯುತ್ತೇವೆ. “ಆತನು ಉಂಟು ಮಾಡಿದ್ದೆಲ್ಲವೂ ಒಳ್ಳೇದೇ; ದೇವರ ಸ್ತೋತ್ರ ಮಾಡಿ ತೆಗೆದು ಕೊಳ್ಳುವ ಪಕ್ಷಕ್ಕೆ ಯಾವದನ್ನೂ ನಿಷಿದ್ಧವೆಂದು ಹೇಳತಕ್ಕದ್ದಲ್ಲ” (1ತಿಮೊಥೆ 4:4) ಎಂದು ಪೌಲನು ಬರೆದಿದ್ದಾನೆ. “ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ” (ಇಬ್ರಿಯ 12:28) ಎಂದು ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಬರೆದಿದ್ದಾನೆ. ಕೊಲೊಸ್ಸೆ 2:7ರ ಪ್ರಕಾರ ನಾವು “ಕೃತಜ್ಞತೆಯಿಂದ ತುಂಬಿ ತುಳುಕು ವವರಾಗಿರಬೇಕು.” ಈ ಪಾಠವು ಹೃದಯವನ್ನು ಕರಗಿಸಿ ಮನಸ್ಸಾಕ್ಷಿಯನ್ನು ಚುಚ್ಚುವಂತೆ ಮಾಡುವದಕ್ಕಿಂತ ಹೆಚ್ಚಾಗಿ ಮನಸ್ಸಿಗೆ ಶಿಕ್ಷಣ ಕೊಡುವದಕ್ಕಾಗಿ ಇರುವದಿಲ್ಲ (2 ಪೇತ್ರ 1:12, 13).

### ಯೇಸುವಿನ ದಿನಗಳಲ್ಲಿ ಕೃತಘ್ನತೆ

“ಅತನು ಯೆರೂಸಲೇಮಿಗೆ ಪ್ರಯಾಣ ಮಾಡುವಾಗ” (ವ. 11ಎ) ಎಂದು ಲೂಕ 17 ಹೇಳುತ್ತದೆ. ಯೇಸು “ಯೆರೂಸಲೇಮಿನ ಮಾರ್ಗದಲ್ಲಿ” ಎಂದು ಲೂಕನ ಪುಸ್ತಕವು ಹೇಳುವುದು ಇದು ಮೂರನೆಯ ಸಲ.[1] ಸಮಯವು ಕ್ರೂಜೆಗೆ ಸಮೀಪವಾಗುತ್ತಾ ಇತ್ತು. “… ಸಮಾರ್ಯ ಗಲಿಲಾಯ ಸೀಮೆಗಳ ನಡುವೆ ಹಾದು ಹೋದನು” (ವ. 11ಬಿ). “ಯೇಸು ಸಮಾರ್ಯ ಮತ್ತು ಗಲಿಲಾಯಗಳ ಮಧ್ಯದಲ್ಲಿ ಹಾದು ಹೋದನು” ಎಂದು NIV ಹೇಳುತ್ತದೆ. ಯೇಸು ಪಶ್ಚಿಮದ ಕಡೆಗೆ ಯೋರ್ದನ್ ಹೊಳೆಯ ಕಡೆಗೆ ಪ್ರಯಾಣ ಮಾಡುತ್ತಿದ್ದಿರ ಬೇಕು. “ಮತ್ತು … ಆತನು ಒಂದು ಹಳ್ಳಿಯನ್ನು ಪ್ರವೇಶಿಸಿದನು” (ವ. 12ಎ). ಲೂಕನು ಹಳ್ಳಿಯ ಹೆಸರನ್ನು ಕೊಡುವದಿಲ್ಲ; ಅದು ಮಹತ್ವದ್ದಾಗಿರುವದಿಲ್ಲ.

ಯೇಸು ಹಳ್ಳಿಯನ್ನು ಪ್ರವೇಶಿಸುವಾಗ “ಹತ್ತು ಮಂದಿ ಕುಷ್ಠರೋಗಿಗಳು ಆತನ ಮುಂದೆ ಬಂದು ದೂರದಲ್ಲಿ ನಿಂತರು” (ವ. 12ಬಿ). ಕುಷ್ಠರೋಗಿಗಳು ಪಟ್ಟಣವನ್ನು ಪ್ರವೇಶಿಸಲಿಕ್ಕೆ ಇರಲಿಲ್ಲ. ಆದರೆ ಬೇಡುವದಕ್ಕಾಗಿ ಅವರು ಊರು ಬಾಗಿಲುಗಳಿಗೆ ಬರಬಹುದಾಗಿತ್ತು.[2] ಬಹುಶಃ ಈ ಕುಷ್ಠರೋಗಿಗಳು ಯೇಸುವು ಪ್ರವೇಶಿಸಲಿಕ್ಕಿದ್ದಾಗ ಹಳ್ಳಿಯ ಪ್ರವೇಶಕ್ಕೆ ಸಮೀಪದಲ್ಲಿ ಇದ್ದಿರಬಹುದು. ಒಬ್ಬನು ಸಮಾರ್ಯದವನಾಗಿದ್ದನು (ವ. 16). ಯೇಸುವಿನ ಅನಂತರದ ಹೇಳಿಕೆಗಳಿಂದ ಉಳಿದವರಲ್ಲಿ ಹೆಚ್ಚಾದವರು ಇಲ್ಲವೇ ಉಳಿದವರೆಲ್ಲರೂ ಯೆಹೂದ್ಯರಾಗಿದ್ದರು (ವ. 18) ಎಂದು ತಿಳಿಯುತ್ತದೆ. ಆ ಜೀವ ವೈರಿಗಳಾಗಿದ್ದ[3] ಯೆಹೂದ್ಯರನ್ನೂ ಸಮಾರ್ಯರನ್ನೂ ಈ ದುಃಖಕರವಾದ ಪರಿಸ್ಥಿತಿಗಳು ಒಂದಾಗಿ ಕೂಡಿಸಿದ್ದವು. ಪ್ರವಾಹದ ನೀರುಗಳು ಉಕ್ಕಿಬರುವಾಗ ಕುರಿ ಹಾಗೂ ತೋಳಗಳು ಚಿಕ್ಕಿ

ನಡುಗಡ್ಡೆಯ ಒಣ ನೆಲದ ಮೇಲೆ ಒಂದಕ್ಕೊಂದು ಹೊಂದಿಕೊಂಡಿರುವವು.

ಕಥೆಯನ್ನು ಸಂಪೂರ್ಣವಾಗಿ ಮೆಚ್ಚಿಕೊಳ್ಳಲು, ಈ ಹತ್ತು ಜನರಿಗಿದ್ದ ಬಾಧೆಯ ಬಗ್ಗೆ ಕೆಲವೊಂದನ್ನು ತಿಳಿಯುವ ಅವಶ್ಯಕತೆಯಿದೆ. ಕುಷ್ಠರೋಗವೆಂದು ಸತ್ಯವೇದವು ಕರೆಯುವ ಬಾಧೆಯು ಭಯಾನಕವಾಗಿದ್ದು ಬಹಳ ಸೋಂಕುವುಳ್ಳದ್ದಾಗಿತ್ತು.[4] ಈ ರೋಗ ವನ್ನು ಅಧ್ಯಯನ ಮಾಡಿದವರು ಅದು ಹೇಸಿಕೆಯನ್ನುಂಟು ಮಾಡುವಂಥ ದೃಶ್ಯ ಎಂದು ಹೇಳುವರು - ಮೊದಲು ಆ ರೋಗವು ಚರ್ಮದ ಬಣ್ಣವನ್ನು ಬದಲಾಯಿಸುತ್ತದೆ - ಗುಲಾಬಿ, ಕಂದು ಬಣ್ಣ ಕೊನೆಗೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಹುಣ್ಣುಗಳಾಗಿ ಚರ್ಮವನ್ನೂ ಎಲುಬು ಗಳನ್ನೂ ಹಾಳು ಮಾಡುತ್ತದೆ. ಎರಡು ವರುಷಗಳೊಳಗಾಗಿ ಮರಣ ಬಂದೇ ಬರುತ್ತದೆ.

ಆ ಹತ್ತುಜನ ಬಹಿಷ್ಕೃತರು ಬೆರಳುಗಳಿಲ್ಲದ ಕೈಗಳನ್ನೂ ಕೈಗಳಿಲ್ಲದ ತೋಳುಗಳನ್ನೂ ಎತ್ತಿ ಹಿಡಿದಿರುವದನ್ನು ನಿಮ್ಮ ಮನಸ್ಸಿನಲ್ಲಿ ಯೋಚಿಸಿರಿ. ಕಣ್ಣುಗಳು, ಕಿವಿಗಳು ಇಲ್ಲದೇ ಮೂಗುಗಳು ಇಲ್ಲದಿರಬಹುದು. ಇವರು ಹೊಲಸಾದವರು, ಕುರೂಪಿಗಳು, ಸೋತ ವರು, ಬೇಡವಾದವರು, ಕುಟುಂಬಗಳಿಲ್ಲದವರು, ಕೆಲಸವಿಲ್ಲದವರು ಇಲ್ಲವೇ ಸಾಮಾನ್ಯ ಸ್ಥಿತಿಯಿಲ್ಲದವರು ಆಗಿದ್ದರು. ಕುಷ್ಠರೋಗವು ದುರ್ಬಲರನ್ನಾಗಿಯೂ ದೀನರನ್ನಾಗಿಯೂ ಮಾಡುವುದಾಗಿತ್ತು.

ಅವರು "ದೂರದಲ್ಲಿ ನಿಂತುಕೊಂಡರು" ಎಂದು ವಚನ 12 ಹೇಳುತ್ತದೆ. ಅವರು ದೂರದಲ್ಲಿ ನಿಲ್ಲಬೇಕೆಂದು ಧರ್ಮಶಾಸ್ತ್ರ ಹೇಳಿತ್ತು. ಎಷ್ಟು ದೂರ ಎಂದು ಧರ್ಮಶಾಸ್ತ್ರ ಸ್ಪಷ್ಟಪಡಿಸಿರಲಿಲ್ಲ. ಆದರೆ ಐವತ್ತು ಹೆಜ್ಜೆ ದೂರ ಎಂದು ಒಬ್ಬ ಧರ್ಮಬೋಧಕನು ಶಿಫಾರಸು ಮಾಡಿದ್ದನು. ಅಂದರೆ ಸುಮಾರು ಐವತ್ತು ಯಾರ್ಡ, ಫುಟ್‌ಬಾಲ್ ಗ್ರೌಂಡಿನ ಅರ್ಧದಷ್ಟು ದೂರ.[5]

ಯೇಸುವನ್ನು ನೋಡಿದಾಗ ಈ ಹತ್ತು ಜನ ಕುಷ್ಠರೋಗಿಗಳು "ಕೂಗಿ ಹೇಳಿದರು" (ವ. 13ಎ). ಈ ರೋಗವು ಅವರ ಧ್ವನಿಗಳ ಮೇಲೆ ಪರಿಣಾಮ ಮಾಡಿತ್ತು. ಹೆಚ್ಚಾಗಿ ಕ್ಷಯರೋಗವು ಈ ರೋಗದೊಂದಿಗೆ ಸಂಬಂಧಿಸಲ್ಪಟ್ಟಿದೆ. ಧ್ವನಿಯು ಒರಟಾದದ್ದೂ ಕರ್ಕಶವಾದದ್ದೂ ಆಗಿತ್ತು. ಇಲ್ಲಿ ಹತ್ತು ಜನರು ಐವತ್ತು ಅಡಿ ದೂರದಲ್ಲಿದ್ದು ಹಾಳಾದ ಧ್ವನಿಗಳೊಂದಿಗೆ ಕೂಗುತ್ತ ಯೇಸುವಿನ ಗಮನ ಸೆಳೆಯಲು ಪ್ರಯತ್ನಿಸಿದರು. "ಯೇಸುವೇ, ಗುರುವೇ, ನಮ್ಮ ಮೇಲೆ ದಯವಿಡು" ಎಂದು ಅವರು ಕೂಗಿ ಹೇಳಿ ದರು (ವ. 13ಬಿ). ಅವರು ಗುಣಪಡಿಸುವಿಕೆಯನ್ನು ಅಪೇಕ್ಷಿಸಿದ್ದರಲ್ಲಿ ಸಂಶಯವಿಲ್ಲ. ದಯೆಗಾಗಿ, ಕರುಣೆಗಾಗಿ, ತಿಳುವಳಿಕೆಗಾಗಿ ಅವರು ಸ್ಪಷ್ಟವಾಗಿ ಕೇಳಿಕೊಂಡರು. ಅವರಿಗೆ ದೈಹಿಕ ಗುಣಪಡಿಸುವಿಕೆಯ ಅವಶ್ಯಕತೆಯಿತ್ತು ಅಷ್ಟೇ ಅಲ್ಲ ಮನಸ್ಸಿನ ಮತ್ತು ಆತ್ಮದ ಗುಣಪಡಿಸುವಿಕೆಯ ಅಗತ್ಯತೆಯೂ ಇತ್ತು.

"ಆತನು ಅವರನ್ನು ನೋಡಿ ... ಎಂದು ಹೇಳಿದನು" ಎಂದು ವ. 14ರಲ್ಲಿದೆ. ಜನರ ಶಬ್ದದಿಂದ ಯೇಸು ಸುತ್ತುವರಿಯಲ್ಪಟ್ಟಿರಬೇಕು. ಒಂದು ವೇಳೆ ಯೇಸುವಿಗೆ ಅವರ ಮಾತು ಮೊದಲು ಕೇಳಿಸಿರಲಿಕ್ಕಿಲ್ಲ. ಆತನು ಸುತ್ತಲೂ ನೋಡಿದಾಗ ದೂರದಲ್ಲಿದ್ದ ಅವರು ಆತನಿಗೆ ಕಂಡಿರಬೇಕು. "ಹೋಗಿ ಯಾಜಕರಿಗೆ ತೋರಿಸಿರಿ" ಎಂದು ಅವರಿಗೆ ಹೇಳಿದನು (ವ. 14ಬಿ).

ಇದಕ್ಕೆ ಮೊದಲು ಯೇಸು ಇನ್ನೊಬ್ಬ ಕುಷ್ಠರೋಗಿಯನ್ನು ಗುಣಪಡಿಸಿದನು. ಆ ಸಂದರ್ಭದಲ್ಲಿ ಯೇಸು ಅವನನ್ನು ಮುಟ್ಟಿ "ಶುದ್ಧನಾಗು" ಎಂದು ಹೇಳಿದ್ದನು (ಲೂಕ 5:13). ಅವನ ಕುಷ್ಠವು ವಾಸಿಯಾದ ಮೇಲೆ ಯೇಸು ಅವನಿಗೆ ಧರ್ಮಶಾಸ್ತ್ರದ ಪ್ರಕಾರ ತನ್ನನ್ನು ಯಾಜಕರಿಗೆ ತೋರಿಸಬೇಕೆಂದು ಆಜ್ಞಾಪಿಸಿದ್ದನು. ಯಾಜಕನ ಕೆಲಸಗಳಲ್ಲಿ ಒಂದು ಅವನು ಹೆಲ್ತ ಇನಸ್ಪೆಕ್ಟರನಾಗಿ ಸೇವೆ ಮಾಡುವುದು.[6] ಕುಷ್ಠ

ರೋಗಿಯು ವಾಸಿ ಯಾಗಿದ್ದಾನೆಂದು ಯಾಜಕರು ತೀರ್ಮಾನಿಸಿದರೆ ಆ ಮನುಷ್ಯನು ಕೆಲವೊಂದು ಯಜ್ಞಗಳನ್ನು ಅರ್ಪಿಸಿ ಸಮಾಜದಲ್ಲಿ ಪುನಃ ಸೇರಿಕೊಳ್ಳ ಬಹುದಿತ್ತು. ಅವನು ತನ್ನ ಮನೆಗೆ ಹೋಗಿ ತನ್ನ ಕುಟುಂಬದೊಂದಿಗೆ ಸೇರಿಕೊಳ್ಳ ಬಹುದಿತ್ತು. ಕೆಲಸ ಮಾಡುವದಕ್ಕೂ ದೇವಾಲಯಕ್ಕೂ ಹೋಗಬಹುದಿತ್ತು.

ಆದರೆ ಈ ಸಮಯದಲ್ಲಿ ಯೇಸು ಈ ಕುಷ್ಠರೋಗಿಗಳ ಬಳಿಗೆ ಹೋಗಲಿಲ್ಲ. ಇಲ್ಲವೇ ಅವರನ್ನು ಮುಟ್ಟಲಿಲ್ಲ, ಸ್ಥಳದಲ್ಲಿಯೇ ಅವರನ್ನು ಗುಣಪಡಿಸಲಿಲ್ಲ.[7] ಅದರ ಬದಲು ವಿಶ್ವಾಸದ ಪರೀಕ್ಷೆಯೊಂದಿಗೆ ಅವರನ್ನು ಆಹ್ವಾನಿಸಿದನು.[8] ಆಗಲೇ ಗುಣಪಟ್ಟವರಂತೆ ಅವರು ಹೋಗಿ ತಮ್ಮನ್ನು ಯಾಜಕರಿಗೆ ತೋರಿಸಿ ಕೊಳ್ಳಬೇಕಾಗಿತ್ತು! (ಈ ಕಥೆಯ ಸ್ಥಳದ ಬಗ್ಗೆ NIV ಸರಿಯಾಗಿದ್ದರೆ - ಗಲಿಲಾಯ ಮತ್ತು ಸಮಾರ್ಯದ ಅಂಚಿನಲ್ಲಿ - ಯೆರೂಸಲೇಮಿಗೆ ಹೋಗಲು ಈ ಹತ್ತು ಜನ ಕುಷ್ಠರೋಗಿಗಳು ಬಹಳ ದೂರ ಪ್ರಯಾಣ ಮಾಡಬೇಕಾಗಿತ್ತು!)

ಕಥೆಯ ಮುಂದಿನ ಭಾಗವು ರೋಮಾಂಚನಕಾರಿಯಾದದ್ದು: "ಅವರು ಹೋಗು ತ್ತಿರುವಾಗಲೇ ಶುದ್ಧರಾದರು" (ವ. 14ಸಿ). ಸಮಾರ್ಯದವನು ಹಿಂದಿರುಗಿ ಬಂದು ಯೇಸುವನ್ನು ಕಂಡುಕೊಳ್ಳಲು ಶಕ್ತನಾದದ್ದರಿಂದ ಹತ್ತು ಜನರು ತಾವು ಶುದ್ಧರಾಗುವ ಮೊದಲು ಬಹಳ ದೂರ ಹೋಗಿರಲಿಲ್ಲವೆಂದು ನಾನು ಊಹಿಸುತ್ತೇನೆ. ಅವರ ದೇಹಕ್ಕೆ ಸ್ವಸ್ಥತೆ ಬಂದಾಗ ಅದು ಹೋಗಿರಬಹುದೆಂದು ಕಲ್ಪಿಸಿರಿ - ಅವರ ಕಣ್ಣುಗಳು, ಕಿವಿಗಳು ಹಾಗೂ ಗಂಟಲುಗಳು ಗುಣಪಡಿಸಲ್ಪಟ್ಟವು. ಹಳೆ ಹುಣ್ಣುಗಳು ಬಿದ್ದು ಹೋಗಿ ಚರ್ಮ ಆರೋಗ್ಯಕರವಾದದ್ದಾಯಿತು. ಹೊಸ ಎಲುಬುಗಳು ರೂಪಿಸಲ್ಪಟ್ಟವು. ಹೊಸ ರಕ್ತನಾಳಗಳೂ ನರಗಳೂ ಹೊಸ ಚರ್ಮದಲ್ಲೆಲ್ಲಾ ತುಂಬಿಕೊಂಡವು. ಅವರ ಇಡೀ ದೇಹಗಳಲ್ಲಿ ಆರೋಗ್ಯವೂ, ಚೈತನ್ಯವೂ ತುಂಬಿತುಳುಕಿತು! ಅವರ ಹೃದಯದಲ್ಲಿ ಎಂಥಾ ಕುತೂಹಲ ಹುಟ್ಟಿರಬೇಕು! "ನಾನು ಪುನಃ ಪರಿಪೂರ್ಣನಾದೆನು" "ನಾನು ಮನೆಗೆ ಪುನಃ ಹೋಗಬಹುದು," "ನಾನು ಸಮಾಜಕ್ಕೆ ಹಿಂದಿರುಗಿ ಹೋಗಬಹುದು," "ನಾನು ಪುನಃ ದೇವಾಲಯಕ್ಕೆ ಹೋಗಬಹುದು."

ಈ ಹತ್ತು ಜನರಲ್ಲಿದ್ದ ಹೋಲಿಕೆಗಳನ್ನು ಗಮನಿಸಿರಿ: (1) ಎಲ್ಲರೂ ಭಯಂಕರ ವಾದ ರೋಗದಿಂದ ಪೀಡಿತರಾಗಿದ್ದರು. (2) ಅದರ ಬಗ್ಗೆ ಏನಾದರೂ ಮಾಡಬೇಕೆಂದು ಎಲ್ಲರೂ ತೀರ್ಮಾನಿಸಿಕೊಂಡರು. (3) ಯಾವುದೇ ರೀತಿಯಲ್ಲಿ ಯೇಸುವು ಸಹಾಯ ಮಾಡುವನೆಂದು ಎಲ್ಲರೂ ನಂಬಿದರು. (4) ಎಲ್ಲರೂ ಯೇಸುವಿಗೆ ವಿನ್ನವಿಸಿಕೊಂಡರು. (5) ಎಲ್ಲರೂ ಯೇಸುವಿಗೆ ವಿಧೇಯರಾದರು ಮತ್ತು ಯಾಜಕರಿದ್ದ ಸ್ಥಳಕ್ಕೆ ಹೊರಟರು. (6) ಎಲ್ಲರೂ ಸ್ವಸ್ಥರಾದರು. ಅಲ್ಲಿಗೆ ಹೋಲಿಕೆಯು ಮುಗಿಯುತ್ತದೆ. "ಅವರಲ್ಲಿ ಒಬ್ಬನು" ಎಂದು ವ. 15 ಪ್ರಾರಂಭವಾಗುತ್ತದೆ. ಸ್ವಲ್ಪ ಸಮಯದಲ್ಲಿಯೇ ಇವನು ಸಮಾರ್ಯದವನೆಂದು ತಿಳಿದುಕೊಳ್ಳುವೆವು. "ಅವರಲ್ಲಿ ಒಬ್ಬನು ತನಗೆ ಗುಣವಾ ದದ್ದನ್ನು ನೋಡಿ ... ಹಿಂದಿರುಗಿ ಬಂದನು" (ವ. 15ಎ). ಯೇಸು ಆಜ್ಞಾಪಿಸಿದ್ದನ್ನು ಅವನು ಅನಂತರ ಮಾಡಿದ್ದರಲ್ಲಿ ಸಂಶಯವಿಲ್ಲ.[9] ಆದರೆ ಮೊದಲು ಅವನು ತನ್ನಲ್ಲಿ ಉಕ್ಕುತ್ತಿರುವ ಮೆಚ್ಚಿಗೆಯನ್ನು ಪ್ರಕಟಿಸಲು ಬಯಸಿದನು.

ಅವನು, "ದೇವರನ್ನು ಕೊಂಡಾಡುತ್ತಾ ಹಿಂದಿರುಗಿ ಬಂದನು" (ವ. 15ಬಿ) ಗುಣಪಡಿಸುವ ಶಕ್ತಿಯನ್ನು ದೇವರು ಯೇಸುವಿಗೆ ಕೊಟ್ಟಿರುವನೆಂದು ಅವನು ತಿಳಿದು ಕೊಂಡನು. "ದೊಡ್ಡ ಧ್ವನಿಯಿಂದ ಅವನು ದೇವರನ್ನು ಕೊಂಡಾಡಿದನು" (ವ. 15ಸಿ) - ಕುಷ್ಠರೋಗಿಯ ಕರ್ಕಶ ಧ್ವನಿಯಿಂದಲ್ಲ; ಆದರೆ ಗುಣ ಹೊಂದಿದ ಮನುಷ್ಯನ ಬಲ ವಾದ ಧ್ವನಿಯಿಂದ. "ಯೇಸುವಿನ ಪಾದಗಳಿಗೆ ಅಡ್ಡಬಿದ್ದು ಆತನಿಗೆ ಉಪಕಾರ ಸ್ತುತಿ

ಮಾಡಿದನು" (ವ. 16ಎ) ಯೇಸುವನ್ನು ದೈವವೆಂದು ಗುರುತಿಸಿಕೊಂಡು ಆತನ ಪಾದಗಳ ಬಳಿಯಲ್ಲಿ ಬಿದ್ದು ಆತನಿಗೆ ಕೃತಜ್ಞತೆ ಹೇಳಿ ಆತನನ್ನು ಆರಾಧಿಸಿದನು. "ಉಪಕಾರ ಸ್ತುತಿ ಮಾಡಿದನು" ಎಂಬುದು ವರ್ತಮಾನ ಕಾಲದಲ್ಲಿದೆ. ಗುಣ ಹೊಂದಿದ ಮನುಷ್ಯನು ಯೇಸುವಿಗೆ ಉಪಕಾರ ಹೇಳುತ್ತಲೇ ಇದ್ದನು ಎಂಬುದನ್ನು ಇದು ಸೂಚಿಸುತ್ತದೆ.

ಮುಂದಿನ ಚಿಕ್ಕವಾಕ್ಯವು ಆಘಾತಕೊಡುವ ರೀತಿಯಲ್ಲಿ ವಿವರಣೆಬರುತ್ತದೆ: "ಅವನು ಸಮಾರ್ಯದವನು" (ವ. 16ಬಿ). ನಾವು ಯಾರಿಂದ ನಿರೀಕ್ಷಿಸುವದಿಲ್ಲವೋ ಅಂಥವರಿಂದಲೇ ಹೆಚ್ಚಾಗಿ ಮೆಚ್ಚಿಕೆಯನ್ನು ಪಡೆದುಕೊಳ್ಳುತ್ತೇವೆ. ನಾವು ಯಾರಿಂದ ನಿರೀಕ್ಷಿಸುತ್ತೇವೆಯೋ ಅವರು ನಮ್ಮ ಪ್ರಯತ್ನವನ್ನು ಸುಮ್ಮನೇ ತೆಗೆದು ಕೊಳ್ಳುತ್ತಾರೆ.

ವ. 17ರಲ್ಲಿ ಯೇಸುವಿನ ಧ್ವನಿಯಲ್ಲಿಯ ದುಃಖವನ್ನು ಕೇಳುವಿರೋ? "ಯೇಸು ಇದನ್ನು ನೋಡಿ - ಹತ್ತು ಮಂದಿ ಶುದ್ಧರಾದರಲ್ಲವೇ, ಮಿಕ್ಕ ಒಂಭತ್ತು ಮಂದಿ ಎಲ್ಲಿ?" ಎಂದು ಕೇಳಿದನು. ಅವರು ಹಿಂದಿರುಗಿ ಬಂದು ಯಾವ ಸಿದ್ಧತೆಯಿಲ್ಲದೇ, ಕೀರ್ತನೆ 103ನ್ನು ಹಾಡ ಬಹುದೆಂದು ನಿರೀಕ್ಷಿಸ ಬಹುದಾಗಿತ್ತು:

> ನನ್ನ ಮನವೇ, ಯೆಹೋವನನ್ನು ಕೊಂಡಾಡು;
> ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರನಾಮವನ್ನು ಕೀರ್ತಿಸಿರಿ.
> ನನ್ನ ಮನವೇ, ಯೆಹೋವನನ್ನು ಕೊಂಡಾಡು;
> ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ;
> ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ
> ಸಮಸ್ತ ರೋಗಗಳನ್ನು ವಾಸಿಮಾಡುವವನೂ;
> ನಿನ್ನ ಜೀವವನ್ನು ನಾಶದಿಂದ ತಪ್ಪಿಸುವನೂ; ...
> ಹದ್ದಿಗೆ ಬರುವಂತೆಯೇ ನಿನಗೆ ಯೌವನವನ್ನು ತಿರಿಗಿ ಬರಮಾಡುತ್ತಾನೆ
> (1-5 ವಚನಗಳು).

ಆದರೆ ಅವರು ಹಾಗೆ ಮಾಡಲಿಲ್ಲ. ಯಾಕೆ? ಬರ್ಟನ್ ಕೊಫ್‌ಮಾನ್ ಅವರು ಈ ಸಲಹೆಗಳನ್ನು ಹೇಳಿದ್ದಾರೆ:

> ಒಬ್ಬನು ಕಾದು ಕೊಂಡಿದ್ದನು ಗುಣವಾದದ್ದು ನಿಜವೋ ಎಂದು ನೋಡಲು.
> ಒಬ್ಬನು ಕಾದು ಕೊಂಡಿದ್ದನು ಅದು ಬಹಳ ಸಮಯ ಇರುವುದೋ ಎಂದು ನೋಡಲು.
> ಒಬ್ಬನು ಹೇಳಿದನು ಆಮೇಲೆ ಯೇಸುವನ್ನು ನೋಡುವೆನು ಎಂದು.
> ಒಬ್ಬನು ತೀರ್ಮಾನಿಸಿಕೊಂಡನು ತನಗೆಂದೂ ಕುಷ್ಠವೇ ಇರಲಿಲ್ಲ ಎಂದು.
> ಒಬ್ಬನು ಹೇಳಿದನು ಹೇಗೂ ಗುಣ ಹೊಂದಿದೆನಲ್ಲ ಎಂದು.
> ಒಬ್ಬನು ಕೊಟ್ಟನು ಯಾಜಕರಿಗೆ ಮಹಿಮೆಯನು.
> ಒಬ್ಬನು ಹೇಳಿದನು, "ಚನ್ನಾಗಿದೆ, ಯೇಸು ಏನನ್ನು ನಿಜವಾಗಿ ಮಾಡಲಿಲ್ಲ" ಎಂದು.
> ಒಬ್ಬನು ಹೇಳಿದನು, "ಯಾವುದೇ ರಬ್ಬಿಯು ಇದನು ಮಾಡಬಹುದಿತ್ತು."
> ಒಬ್ಬನು ಹೇಳಿದನು, "ನಾನು ಆಗಲೇ ಬಹಳ ಸುಧಾರಿಸಿದ್ದೆನು" ಎಂದು.[10]

"ದೇವರನ್ನು ಸ್ತುತಿಸುವದಕ್ಕೆ ಈ ಅನ್ಯದೇಶದವನೇ ಹೊರತು ಇನ್ನಾರೂ ಹಿಂತಿರುಗಿ ಬರಲಿಲ್ಲವೇ" (ವ. 18) ಎಂದು ಯೇಸು ದುಃಖದಿಂದ ಕೇಳಿದನು.

"ಅನ್ಯ ದೇಶದವನು" ಎಂಬ ಪದವು, ಮಹಿಳೆಯರ ಆವರಣದೊಳಗೆ ಅನ್ಯಜನರ ಆವರಣದಿಂದ ಹೋಗುವ ಪ್ರವೇಶ ದ್ವಾರದಲ್ಲಿ ಬರೆಯಲ್ಪಟ್ಟದ್ದರಲ್ಲಿದ್ದವು: "ಬೇರೆ ದೇಶದ ಯಾವುದೇ ಮನುಷ್ಯನು ಬೇಲಿಯ ಹಾಗೂ ದೇವಾಲಯದ ಬೇಲಿಯ ಒಳಗೆ ಪ್ರವೇಶಿಸ ಬಾರದು. ಯಾವನಾದರೂ ಸಿಕ್ಕಿಬಿದ್ದರೆ ಅವನಿಗೆ ಮರಣವಾಗುವದಕ್ಕೆ ಅವನೇ ಹೊಣೆ ಯಾಗಿರುವನು." ಈ ಮನುಷ್ಯನು ನಿಜವಾದ ದೇವಾಲಯ ದೊಳಗೆ ಹೋಗಲಿಕ್ಕೆ ಅಪ್ಪಣೆ ಇರಲಿಲ್ಲ. ಆದರೆ ಅವನು ಯೇಸುವಿನ ಬಳಿಗೆ ಬರಬಹುದಾಗಿತ್ತು.

ತನ್ನ ಪಾದಗಳ ಬಳಿಯಲ್ಲಿ ಆರಾಧಿಸುತ್ತಿದ್ದ ಸಮಾರ್ಯದವನ ಕಡೆಗೆ ಯೇಸು ತಿರುಗಿಕೊಂಡು "ಅವನಿಗೆ - ಎದ್ದು ಹೋಗು, ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥಮಾಡಿಯದೆ" (ವ. 19) ಎಂದು ಹೇಳಿದನು. "ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥಮಾಡಿಯದೆ" ಎಂದು ಯೇಸು ಹೇಳಿದಾಗ ಆತನು ಸ್ಪಷ್ಟವಾದದ್ದನ್ನೇ ಹೇಳಿ ದ್ದಾನೆ. ಹೀಗಿದ್ದರೂ ಈ ಮನುಷ್ಯನು ಕೃತಜ್ಞತೆಯುಳ್ಳವನಾಗಿದ್ದುದರಿಂದ ಯೇಸು ಅವನ ಮೇಲೆ ವಿಶೇಷವಾದ ಆಶೀರ್ವಾದವನ್ನು ಮಾಡಿದನು. ಕೃತಜ್ಞತೆ ಸಲ್ಲಿಸದೇ ಇದ್ದ ಆ ಒಂಭತ್ತು ಜನ ಯೆಹೂದ್ಯರೂ ದೈಹಿಕವಾಗಿ ಗುಣಪಡಿಸಲ್ಪಟ್ಟರು. ಮೂಲ ಭಾಷೆಯಲ್ಲಿ ಈ ವಾಕ್ಯವು ಅಕ್ಷರಾಶಃವಾಗಿ "ನಿನ್ನ ನಂಬಿಕೆಯು ನಿನ್ನನ್ನು ರಕ್ಷಿಸಿದೆ"[11] ಎಂದಾಗುವುದು. ನಿನ್ನ ನಂಬಿಕೆ ಮತ್ತು ಕೃತಜ್ಞತೆಯನ್ನು ಹೇಳುವಲ್ಲಿ ನೀನು ಅದನ್ನು ಪ್ರಕಟಿಸಿದ್ದು[12] ನಿನ್ನನ್ನು ದೈಹಿಕವಾಗಿಯೂ ಆತ್ಮಿಕವಾಗಿಯೂ ಗುಣಪಡಿಸಿದೆ ಎಂದು ಯೇಸು ಹೇಳಿದ ಸಾಧ್ಯತೆಯಿದೆ. "ರಕ್ಷಣೆಯು ನಿನ್ನ ಮನೆಗೆ ಬಂದಿದೆ!" (ಲೂಕ 19:9) ಎಂದು ಇನ್ನೊಂದು ಮಾತಿನಲ್ಲಿ ಹೇಳಬಹುದು.

## ನಮ್ಮ ದಿನದಲ್ಲಿ ಕೃತಘ್ನತೆ

ನಾವು ಒಂದು ಬದಿಯಲ್ಲಿ ನಿಂತು, ಈ ಕಥೆಯಲ್ಲಿಯ ಅಂಕಿ ಅಂಶಗಳನ್ನು ನೋಡೋಣ. ಹತ್ತರಲ್ಲಿ ಒಬ್ಬನು ಮಾತ್ರ ಅಂದರೆ ಹತ್ತರಲ್ಲಿ ಒಂದು ಭಾಗದಷ್ಟು ಕೃತಜ್ಞತೆಯನ್ನು ಯೇಸುವಿಗೆ ಸಲ್ಲಿಸಲು ಬಂದನು. ಇದರಿಂದ ನಮಗೆ ಆಘಾತ ವಾಗುತ್ತದೆ. ಆಮೇಲೆ ನಾವು ನಿಂತುಕೊಂಡು ಯೋಚಿಸಬೇಕು. ಇಂದು ಶೇಕಡಾ ಮೊತ್ತವು ಸುಧಾರಿಸಿದೆಯೋ?

ಕೃತಘ್ನತೆಯು ಭಯಂಕರವಾದದ್ದೆಂದು ನಾವೆಲ್ಲರೂ ತಿಳಿದಿದ್ದೇವೆ. ಆದರೆ ಈ ತಿಳುವಳಿಕೆಯು ನಿಜವಾಗಿಯೂ ನಮ್ಮ ಜೀವನಗಳ ಮೇಲೆ ಎಷ್ಟು ಪರಿಣಾಮ ಮಾಡುತ್ತವೆ? ಅನೇಕ ವರ್ಷಗಳ ಹಿಂದೆ ಒಂದು ಪ್ರಕಟಣೆಯಲ್ಲಿ "Ingratitude" ಎಂಬ ಶಿರೋನಾಮವುಳ್ಳ ಒಂದು ಪೂರ್ತಿಪುಟದ ದೃಷ್ಟಾಂತವನ್ನು ನೋಡಿದನು. ಪುಟದ ಮಧ್ಯದಲ್ಲಿ "Ingratitude" ಎಂಬ ಅಕ್ಷರಗಳು ದೊಡ್ಡ ಅಕ್ಷರ ಚಿತ್ರಗಳಾಗಿ ಮುದ್ರಿಸಲ್ಪಟ್ಟಿದ್ದವು. ಇದರ ಸುತ್ತಲೂ ಒಂದರ ಕಡೆಗೆ ಕಲ್ಲುಗಳನ್ನು ಎಸೆಯುತ್ತಿದ್ದ ಒಂದು ಜನರ ಗುಂಪು ಇತ್ತು. ಅದನ್ನು ನಾನು ಹೆಚ್ಚು ಸಮೀಪದಿಂದ ನೋಡಿದಾಗ, ಗುಂಪಿನಲ್ಲಿಯ ಪ್ರತಿಯೊಬ್ಬರೂ ಕೈಯಲ್ಲಿ "Ingratitude" ಎಂದು ಬರೆದ ರೂಪಕಗಳನ್ನು ಹಿಡಿದು ಕೊಂಡದ್ದು ಕಂಡಿತು. ಹೀಗೆ ಈ ವ್ಯಂಗ್ಯ ಚಿತ್ರಕಾರನು ನಾವು ಇತರರಲ್ಲಿಯ ಕೃತಜ್ಞತೆಯನ್ನು ವಿರೋಧಿಸಿ ಅದಕ್ಕೆ ವಿರುದ್ಧವಾಗಿ ಕೂಗಿದರೂ ನಾವೆಲ್ಲರೂ ನಮ್ಮ ಹೃದಯಗಳಲ್ಲಿ ಈ ವಿಶ್ವಾಸಘಾತಕ ಗುಣವನ್ನು ಇಟ್ಟುಕೊಂಡಿದ್ದೇವೆ ಎಂಬ ತನ್ನ ನಂಬಿಕೆಯನ್ನು ಸ್ಪಷ್ಟಪಡಿಸಿದ್ದನು. ಹತ್ತರಲ್ಲಿ ಒಬ್ಬನು ಕೃತಜ್ಞತೆ ಹೇಳಲು ಯೇಸುವಿನ ಬಳಿಗೆ ಬಂದ ಕಥೆಯನ್ನು ಓದುವಾಗ ನಾವೆಲ್ಲರೂ "ನನ್ನ GQ ಯಾವುದು?": "ನನ್ನ Gratitude Quotient ಯಾವುದು?" (ಕೃತಜ್ಞತೆಯ ಭಾಗಯಾವುದು?) ಎಂದು

ಕೇಳುವ ಅವಶ್ಯಕತೆಯಿದೆ.

ಕೃತಜ್ಞತೆಯಿಂದ ಇರುವುದರ ಬಗ್ಗೆ ಸತ್ಯವೇದವು ಹೆಚ್ಚು ಒತ್ತಿ ಹೇಳುತ್ತದೆ.

> ಕ್ರಿಸ್ತನಿಂದಾದ ಸಮಾಧಾನವು ನಿಮ್ಮ ಹೃದಯಗಳಲ್ಲಿ ಯಜಮಾನನಂತಿದ್ದು ತೀರ್ಪು ಹೇಳಲಿ; ನೀವು ಒಂದೇ ದೇಹಕ್ಕೆ ಸೇರಿದವರಾದದರಿಂದ ಸಮಾಧಾನದಿಂದಿರುವದಕ್ಕಾಗಿ ಕರೆಯಲ್ಪಟ್ಟಿರಿ. ಇದಲ್ಲದೆ ಕೃತಜ್ಞತೆ ಯುಳ್ಳವರಾಗಿರ್ರಿ (ಕೊಲೊಸ್ಸೆ. 3:15).

> ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿ ಅದರಲ್ಲಿ ಎಚ್ಚರವಾಗಿದ್ದು ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ (ಕೊಲೊಸ್ಸೆ 4:2).

> ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ (1 ಥೆಸಲೋನಿಕ 5:18).

"ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ" ಎಂಬ ಮಾತುಗಳಲ್ಲಿ ಯಾವ ಆಹ್ವಾನವಿದೆ! ಕೃತಜ್ಞತೆ ಸಲ್ಲಿಸಲು ನಮಗೆ ಯಾವಾಗಲೂ ಏನಾದರೂ ಇರುತ್ತದೆ. ಯಾವುದೇ ಪರಿಸ್ಥಿತಿಯಲ್ಲಿ ಯಾವಾಗಲೂ ಒಳ್ಳೆಯದನ್ನೇ ನೋಡುತ್ತ ಅದಕ್ಕಾಗಿ ದೇವರಿಗೆ ಉಪಕಾರ ಸ್ತುತಿ ಹೇಳುವ ಒಬ್ಬ ಮನುಷ್ಯನ ಬಗ್ಗೆ ಒಂದು ಕಥೆ ಹೇಳಲ್ಪಡುತ್ತದೆ. ಒಂದು ದಿನ ಭಯಂಕರವಾದ ಚಳಿಗಾಲದ ಬಿರುಗಾಳಿ ಬೀಸುತ್ತಿತ್ತು. ಮಂಜು, ಹಿಮಗಡ್ಡೆ, ಹಿಮದಿಂದ ದಪ್ಪವಾಗಿ ಎಲ್ಲಾ ಕಡೆ ಮುಚ್ಚಿಕೊಂಡಿತ್ತು. ವಿದ್ಯುತ್ ಶಕ್ತಿ ಕಡಿದು ಹೋದದ್ದರಿಂದ ಚಟುವಟಿಕೆ ನಿಂತು ಹೋಗಿತ್ತು. ಈ ಮನುಷ್ಯನನ್ನೊಳ ಗೊಂಡು ಕೆಲವೇ ಜನರು ಕ್ರಮಪ್ರಕಾರವಾದ ಪ್ರಾರ್ಥನಾಕೂಟದಲ್ಲಿ ಭಾಗವಹಿಸಿದರು. ಈ ಮನುಷ್ಯನು ಕರ್ತನಿಗೆ ಉಪಕಾರ ಹೇಳಲು ಯಾವ ಒಳ್ಳೆಯ ಸಂಗತಿಯನ್ನು ಹುಡುಕುವನು ಎಂದು ಎಲ್ಲರೂ ಕಾಯುತ್ತಿದ್ದರು. ಪ್ರಾರ್ಥಿಸಲು ಅವನ ಸರದಿ ಬಂದಾಗ "ಯಾವಾಗಲೂ ಹವಾಮಾನವು ಈ ರೀತಿಯಲ್ಲಿ ಇರದೇ ಇರುವದಕ್ಕಾಗಿ ಕರ್ತನೇ, ನಿನಿಗೆ ಸ್ತೋತ್ರ" ಎಂದು ಅವನು ಹೇಳಿದನು.

ನಮಗೆ ತೋರಿಸಲ್ಪಟ್ಟ ಪರಿಸ್ಥಿತಿಯಲ್ಲಿ ಒಳ್ಳೆಯದನ್ನು ನಮ್ಮಲ್ಲಿ ಹೆಚ್ಚಾದವರು ಕಾಣುವ ಅವಶ್ಯಕತೆಯಿದೆ. ಅದು ಕೃತಜ್ಞತಾಸ್ತುತಿಯ ದಿನವಾಗಿತ್ತು. ಕೋಪಿಷ್ಠ ಅಂಕಲ್ ಮೊರ್ಟ್ಟ ಅವರನ್ನೊಳಗೊಂಡು ಇಡೀ ಕುಟುಂಬ ಒಂದಾಗಿ ಕೂಡಿತ್ತು. ಅವರು ಊಟ ಮಾಡುವ ಮೊದಲು ಟೇಬಲಿನ ಸುತ್ತ ಹೋಗಿ ತಾವು ಯಾವುದಕ್ಕೆ ಕೃತಜ್ಞರಾಗಿದ್ದೇವೆ ಎಂದು ಹೇಳುತ್ತಿದ್ದರು. ಮೊರ್ಟ್ಟನ ಸರದಿ ಬಂದಾಗ ಅವನು "ದಾಟಲಿ" ಎಂದನು. ಆದರೆ ಅವನ ಪಕ್ಕದಲ್ಲಿದ್ದ ಚಿಕ್ಕ ಬಾಲಕನು "ತಡೆಯಿರಿ, ಅಂಕಲ್ ಮೊರ್ಟ್ಟ, ನೀವು ಯಾವುದಕ್ಕಾಗಿ ಕೃತಜ್ಞರಾಗಿದ್ದೀರೆಂದು ಹೇಳಲೇ ಬೇಕು" ಎಂದನು. "ಕೃತಜ್ಞತೆ ಹೇಳಲು ನನಗೇನೂ ಇಲ್ಲ" ಎಂದು ಮೊರ್ಟ್ಟ ಹೇಳಿದ. ಟೇಬಲ್ ಮೇಲಿನ ಬಂಗಾರದ ಪಕ್ಷಿಯನ್ನು ನೋಡಿ, "ನೀವು ಟರ್ಕಿ ಆಗಿರುವದಿಲ್ಲ ಎಂಬುದಕ್ಕಾಗಿಯಾದರೂ ಕೃತಜ್ಞರಾಗಿರಬೇಕು" ಎಂದನು ಬಾಲಕ.

ಒಂದು ಕೃತಜ್ಞತಾ ಸ್ತುತಿಯ ದಿನದಂದು, ಕನ್ನಡಕ ಧರಿಸಿದ ಚಿಕ್ಕ ಬಾಲಕನು "ನನ್ನ ಕನ್ನಡಕಗಳಿಗಾಗಿ ನಾನು ಕೃತಜ್ಞತೆಯುಳ್ಳವ ನಾಗಿದ್ದೇನೆ" ಎಂದು ಹೇಳಿ ದನು. "ನೋಡಲಿಕ್ಕೆ ಅವು ಸಹಾಯ ಮಾಡುತ್ತವೆ ಅದಕ್ಕಾಗಿಯೋ?" ಎಂದು ಒಬ್ಬರು ಪ್ರಶ್ನಿಸಿದರು. "ಇಲ್ಲ, ಅವು ನನ್ನೊಂದಿಗೆ ಹೊಡೆದಾಡದಂತೆ ಬಾಲಕರನ್ನು

ದೂರವಿಡುತ್ತವೆ ಹಾಗೂ ನನಗೆ ಮುತ್ತು ಕೊಡದಂತೆ ಬಾಲಕಿಯರನ್ನು ದೂರವಿಡುತ್ತವೆ" ಎಂದು ಉತ್ತರ ಕೊಟ್ಟನು. "ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ." ಕೃತಜ್ಞತೆ ಸಲ್ಲಿಸುವಂತೆ ನಮಗೆ ಯಾವಾಗಲೂ ಏನಾದರೂ ಇರುತ್ತದೆ.

ಕೃತಜ್ಞತೆಯಿಲ್ಲದವರ ಪಾಪದ ಬಗ್ಗೆ ಸತ್ಯವೇದ ಮಾತಾಡುತ್ತದೆ. ತನ್ನ ದಿನದಲ್ಲಿಯ ಮಾನವತೆಯ ದುಃಖದ ಪರಿಸ್ಥಿತಿಯ ಬಗ್ಗೆ ಪೌಲನು ಮಾತನಾಡಿದಾಗ ಹೀಗೆ ಬರೆದನು: "ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆ ಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ" (ರೋಮಾಪುರ 1:21). ಮುಂಬರುವ ದಿನಗಳಲ್ಲಿಯ ಮಾನವ ಜನಾಂಗದ ದುಃಖದ ಸ್ಥಿತಿಯ ಬಗ್ಗೆ ಅವನು ಅನಂತರದಲ್ಲಿ ಬರೆದಾಗ, "ಮನುಷ್ಯರು ಸ್ವಾರ್ಥ ಚಿಂತಕರೂ ಹಣದಾಸೆಯವರೂ ಬಡಾಯಿ ಕೊಚ್ಚುವವರೂ ಅಹಂಕಾರಿಗಳೂ ದೂಷಕರೂ ತಂದೆತಾಯಿಗಳಿಗೆ ಅವಿಧೇಯರೂ, ಉಪಕಾರ ನೆನಸದವರೂ ..." (2 ತಿಮೊಥೆ 3:2) ಎಂದು ಹೇಳಿದನು.

ಒಂದು ಪುರಾತನದಂತ ಕಥೆಯಂತೆ ಇಬ್ಬರು ದೇವದೂತರು ಮಾನವರ ಪ್ರಾರ್ಥನೆಗಳನ್ನು ಸಂಗ್ರಹಿಸಲು ಭೂಲೋಕಕ್ಕೆ ಕಳುಹಿಸಲ್ಪಟ್ಟರು. ಒಬ್ಬನು ತನ್ನ ಬುಟ್ಟಿಯನ್ನು ಜನರ ಬಿನ್ನ ಹಗಳಿಂದ - ಅವರು ಬೇಡಿಕೊಂಡ ಸಂಗತಿಗಳಿಂದ ತುಂಬಿಸಿಕೊಳ್ಳ ಬೇಕಾಗಿತ್ತು. ಇನ್ನೊಬ್ಬನು ಅವರ ಕೃತಜ್ಞತೆಯ ಪ್ರಾರ್ಥನೆಗಳಿಂದ ತುಂಬಿಸಿಕೊಳ್ಳಬೇಕಾಗಿತ್ತು. ಕೆಲಸಮಯದ ನಂತರ ದೇವರ ಸಿಂಹಾಸನದ ಬಳಿಗೆ ಹಿಂದಿರುಗಿ ಬಂದರು. ಮೊದಲನೆಯವನ ಬುಟ್ಟಿಯು ಎಣಿಸಲ್ಪಡಲಾರದಷ್ಟು ಜನರ ಬಿನ್ನಹಗಳಿಂದ ತುಂಬಿತುಳುಕುತ್ತಿತ್ತು. ಎರಡನೆಯವನು ದುಃಖದಿಂದ ಭಾರವಾದ ಹೃದಯದಿಂದ ಬಂದನು; ಅವನ ಬುಟ್ಟಿಯು ಬಹಳವಾಗಿ ಖಾಲಿಯಾಗಿತ್ತು.

ಮನುಷ್ಯರ ಹಾಗೂ ದೇವರ ಕಡೆಗೆ ಕೃತಜ್ಞತೆಯಿಲ್ಲದವರ ಅನೇಕ ಕಥೆಗಳನ್ನು ಹೇಳಬಹುದು. ವರ್ಷಗಳ ಹಿಂದೆ ಜನರಿಂದ ತುಂಬಿದ್ದ ಪ್ರಯಾಣಿಕ ಹಡಗು ಲೇಕ್ ಮಿಷೀಗನ್‌ದ ತೀರದಲ್ಲಿ ಅಪಘಾತಕ್ಕೊಳಗಾಯಿತು. ಎಡ್ವರ್ಡ್ ಸ್ಪೆನ್ಸರ್ ಎಂಬ ವಿದ್ಯಾರ್ಥಿ ದಡದಲ್ಲಿ ನಿಂತುಕೊಂಡಿದ್ದಾಗ ಒಡೆದ ಹಡಗಿನ ಒಂದು ಭಾಗವನ್ನು ಹಿಡಿದು ಕೊಂಡು ಹೋರಾಡುತ್ತಿದ್ದದ್ದನ್ನು ನೋಡಿದನು. ಅವನು ತನ್ನ ಕೋಟನ್ನು ಕಳಚಿಬಿಟ್ಟು ಬಲವಾದ ತೆರೆಗಳೊಳಗೆ ಈಜಿ ಹೋಗಿ ಕೊನೆಗೆ ಆಕೆಯನ್ನು ಉಳಿಸಿ ದಡಕ್ಕೆ ತಂದು ಸೇರಿಸಿದನು. ಇನ್ನೂ ಹದಿನಾರು ಸಲ ಅವನು ಬಲವಾದ ತೆರೆಗಳೊಳಗೆ ನುಗ್ಗಿ ಹೋಗಿ ಒಟ್ಟು ಹದಿನೇಳು ಜನರನ್ನು ಕಾಪಾಡಿದನು. ಆಗ ಆಯಾಸದಿಂದ ಮೂರ್ಛೆ ಹೋದನು. ಆ ಪ್ರಯತ್ನದ ಪರಿಣಾಮವಾಗಿ ದೈಹಿಕ ಬಲಹೀನತೆಯಿಂದ ಸುಧಾರಿಸಿ ಕೊಳ್ಳಲೇ ಇಲ್ಲ. ತನ್ನ ಜೀವನದ ಉಳಿದ ಎಲ್ಲಾ ದಿನಗಳಲ್ಲಿ ಅಸ್ವಸ್ಥನಾಗಿಯೇ ಇದ್ದನು. ವರ್ಷಗಳ ನಂತರ ಅವನ ಮರಣದ ನೋಟೀಸಿನಲ್ಲಿ, ವರ್ತಮಾನ ಪತ್ರಿಕೆಯಲ್ಲಿ ಹೀಗೆ ಬರೆದಿತ್ತು: "ಕಾಪಾಡಿ ಉಳಿಸಲ್ಪಟ್ಟ ಹದಿನೇಳು ಜನರಲ್ಲಿ ಉಪಕಾರ ಹೇಳಲು ಒಬ್ಬರಾದರೂ ಅವನ ಬಳಿಗೆ ಬರಲೇ ಇಲ್ಲ."

ಬೇರೆಯವರ ಮೇಲೆ ತೀರ್ಪು ಹೇಳುವುದು ನಮ್ಮ ಕೆಲಸವಲ್ಲ. ನಾವು ನಮ್ಮ ಬಗ್ಗೆಯೇ ಚಿಂತಿಸಿಕೊಳ್ಳಬೇಕು. ನಾವಿರಬೇಕಾದಷ್ಟು ರೀತಿಯಲ್ಲಿ ಕೃತಜ್ಞರಾಗಿರುವೆವೋ? ಸ್ವಂತದ ಪರೀಕ್ಷೆಗಾಗಿ ಕೆಲವು ನಿಮಿಷಗಳನ್ನ ತೆಗೆದು ಕೊಳ್ಳೋಣ.

ನಮ್ಮ ಮನೆಗಳಲ್ಲಿ ನಾವು ಇರಬೇಕಾದಷ್ಟು ರೀತಿಯಲ್ಲಿ ಕೃತಜ್ಞರಾಗಿರುವೆವೋ? 2 ತಿಮೊಥೆ 3ರಲ್ಲಿ ಪೌಲನು ಮಾನವರ ಪಾಪಗಳ ಯಾದಿ ಮಾಡಿದಾಗ, "ತಂದೆ ತಾಯಿಗಳಿಗೆ ಅವಿಧೇಯರೂ" ಎಂಬುದರ ನಂತರ ಕೂಡಲೇ "ಉಪಕಾರ

ನೆನಸದವರೂ" ಎಂಬುದನ್ನು ಹೇಳಿದ್ದು ಕಾಕತಾಳೀಯವೇ? ಅದು ಕಾಕತಾಳೀಯವಾದದ್ದೋ ಎಂಬುದನ್ನು ನಾನು ತಿಳಿದಿರುವದಿಲ್ಲ. ಆದರೆ ನಮ್ಮಲ್ಲಿ ಅನೇಕರು ನಮ್ಮ ತಂದೆ ತಾಯಿಗಳಿಗೆ ಕೃತಜ್ಞತೆಯುಳ್ಳವರು ಆಗಿರುವುದೇ ಇಲ್ಲ ಎಂಬುದನ್ನು ತಿಳಿದು ಕೊಂಡಿದ್ದೇನೆ. ನಮ್ಮ ಜೀವನದಲ್ಲಿ ಕೆಲವು ಸಲ ಅವರು ನಮ್ಮನ್ನು ಜೋಪಾನ ಮಾಡದಿದ್ದರೆ, ಒಂದು ವಾರದ ಅಲಕ್ಷ್ಯದಿಂದ ನಾವು ಕೊಲ್ಲಲ್ಪಡ ಬಹುದಿತ್ತು. ನಮ್ಮ ಪ್ರಾರಂಭದ ದಿನಗಳಲ್ಲಿ ಪ್ರತಿಯೊಂದಕ್ಕೂ ನಮ್ಮ ತಂದೆ ತಾಯಿಗಳ ಮೇಲೆ ಅವಲಂಬಿಸಿದ್ದೇವು. ತಂದೆ ಯಾಗಲೀ ತಾಯಿಯಾಗಲೀ ಮುದುಕರಾಗುವಾಗ ಅವರು ಬೇಡವಾದವರಾಗುತ್ತಾರೆ. ಯುವಜನರು ಅವರ ಸಾಲ ತೀರಿಸಲು ಇಚ್ಚಿಸುವುದಿಲ್ಲ. ಶೇಕ್ಸ್‌ಪಿಯರನು ಕಿಂಗ್‌ಲಿಯರದಲ್ಲಿ ತನ್ನ ಕಾಲದಲ್ಲಿಯ ದುಃಖದ ವಿಷಯವನ್ನು ಹೀಗೆ ಹೇಳಿದ್ದಾನೆ: "ಕೃತಜ್ಞತೆಯಿಲ್ಲದ ಮಗನಿರುವುದು ಸರ್ಪದ ಹಲ್ಲಿಗಿಂತಲೂ ಹೆಚ್ಚು ಚೂಪಾಗಿರುವುದು."

ನಮ್ಮಜೊತೆಯವರೊಂದಿಗೆಇರಬೇಕಾದರೀತಿಯಲ್ಲಿನಾವುಕೃತಜ್ಞರಾಗಿರುವೆವೋ? ನಮ್ಮ ಜೊತೆ ಮಾನವರ ಕಡೆಗೆ ಕೃತಜ್ಞತೆಯಿಲ್ಲದ್ದನ್ನು ವಿಚಾರಿಸುವಾಗ ಬೈಬಲಿನ ಅನೇಕ ಉದಾಹರಣೆಗಳು ನಮ್ಮ ಮನಸಿಗೆ ಬರುತ್ತವೆ: ಲಾಬಾನನು ತನ್ನ ಅಳಿಯ ಯಾಕೋಬನ ಪ್ರಯತ್ನಗಳನ್ನು ಮೆಚ್ಚಿಕೊಳ್ಳಲಿಲ್ಲ (ಆದಿಕಾಂಡ 31:6, 7); ಸೆರೆಮನೆಯಲ್ಲಿ ಅಡಿಗೆಯವನು ಯೋಸೇಫನನ್ನು ಮರೆತನು (ಆದಿಕಾಂಡ 40:23); ಇಸ್ರಾಯೇಲ್ಯರು ತಮ್ಮನ್ನು ಬಿಡುಗಡೆ ಮಾಡಿದ ಮೋಶೆಗೆ ಕಲ್ಲೆಸೆಯಲು ಸಿದ್ಧರಾಗಿದ್ದರು (ವಿಮೋಚನಾಕಾಂಡ 17:1-4); ದಾವೀದನಿಂದ ತನ್ನ ಪ್ರಾಣ ಉಳಿಸಲ್ಪಟ್ಟಿದ್ದರೂ ಸೌಲನು ಅವನನ್ನು ಕೊಲ್ಲಲು ಹುಡುಕಿದನು (2 ಸಮುವೇಲ 16:1, 2).

ನಮ್ಮಲ್ಲಿ ಪ್ರತಿಯೊಬ್ಬರೂ ಅನೇಕ ಜನರಿಗೆ ಹೆಚ್ಚು ಸಾಲಗಳನ್ನು ಕೊಡಬೇಕಾಗಿದೆ. ಅವರು ನಮ್ಮ ಸ್ನೇಹಿತರು, ಕ್ರಿಸ್ತನಲ್ಲಿ ಸಹೋದರ ಸಹೋದರಿಯರು ಇಲ್ಲವೇ ಶಿಕ್ಷಕರು ಆಗಿರಬಹುದು. ನಮ್ಮಲ್ಲಿ ಕೆಲವರು ವೈದ್ಯರಿಗೆ, ಸರ್ಜನರಿಗೆ ಅವರು ನಮ್ಮ ಜೀವಗಳನ್ನು ರಕ್ಷಿಸಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಬೇಕಾಗಿದೆ. "ಉಪಕಾರ" ಎಂದು ನಾವು ಹೇಳಿದ್ದೇವೋ? ಬಹಳ ತಡವಾಗುವ ಮೊದಲು ನಾವು ಅದನ್ನು ಮಾಡೋಣ.

ಕೃತಜ್ಞರಾಗಿರುವದರ ಬಗ್ಗೆ ಮಾತನಾಡುತ್ತ ಒಬ್ಬ ಪ್ರಸಂಗಿ ಒಮ್ಮೆ ಈ ಹೇಳಿಕೆ ಕೊಟ್ಟನು: "ಪರಲೋಕದಲ್ಲಿ ಟೆಲೆಫೋನುಗಳು ಇರುವದಿಲ್ಲ." (ಹೀಗಿರುವದರಿಂದಲೇ ನಾನು ಅಲ್ಲಿಗೆ ಹೋಗಲು ಬಯಸುತ್ತೇನೆ!) ಯಾರಾದರೂ ಅಲ್ಲಿಗೆ ಹೋದರೆ, "ನಿನಗೆ ಉಪಕಾರ" ಎಂದು ಹೇಳುವುದು ಬಹಳ ತಡವಾಗಿ ಹೋಗುತ್ತದೆ ಎಂಬುದು ಅವರ ಮಾತಿನ ಅರ್ಥ. ಬಿಲ್ ಎಂಬ ಸ್ನೇಹಿತ ಒಂದು ಸಲ ನನಗೆ ದೊಡ್ಡ ಉಪಕಾರ ಮಾಡಿದನೆಂದು ಇಟ್ಟುಕೊಳ್ಳೋಣ. ನಾನು ಅವನಿಗೆ ಸರಿಯಾಗಿ ಉಪಕಾರ ಹೇಳಲೇ ಇಲ್ಲ. ಅವನು ಸತ್ತನಂತರ ನಾನು ಫೋನು ಎತ್ತಿಕೊಂಡು, "ದೂರದ ಕರೆಗಾಗಿ ಕೊಡಿರಿ. ಅಂದರೆ L-O-N-G distance. ಪರಲೋಕದಲ್ಲಿ ಬಿಲ್ ಅವರೊಂದಿಗೆ ಮಾತಾಡಬೇಕು. ಬಿಲ್ ನೀನೋ? ಚೆನ್ನಾಗಿದಿಯೋ. ನಿನಗೆ ಉಪಕಾರ ಹೇಳಲು ಕರೆ ಮಾಡಿದ್ದೇನೆ" ಎಂದು ಹೇಳಲಿಕ್ಕಾಗುವದಿಲ್ಲ.

ಕೆಲವು ಸಲ ಶವಸಂಸ್ಕಾರದ ಸಮಯದಲ್ಲಿ ಶವಪೆಟ್ಟಿಗೆಯಲ್ಲಿದ್ದ ಜೀವವಿಲ್ಲದ ಶವಕ್ಕೆ "ನಾನು ನಿನ್ನನ್ನು ಪ್ರೀತಿಸುತ್ತೇನೆ; ನಿನ್ನನ್ನು ಮೆಚ್ಚಿಕೊಳ್ಳುತ್ತೇನೆ. ನಿನಗಾಗಿ ಚಿಂತಿಸುತ್ತೇನೆ" ಎಂದು ಹೇಳಲು ಪ್ರಯತ್ನಿಸುತ್ತಾರೆ. ಅದು ಬಹಳ ತಡವಾಗಿ ಹೋಗಿರುತ್ತದೆ.

ಚಂಚಲ ಚಿತ್ತನಾದ ಟೆಕ್ಸಾಸಿನ ಒಬ್ಬ ವ್ಯಾಪಾರಿಯು ತನ್ನ ಸ್ನೇಹಿತರಿಗೂ ಗ್ರಾಹಕರಿಗೂ ಕೊಡುವದಕ್ಕಾಗಿ ಒಂದು ಪುಸ್ತಕವನ್ನು ಅಚ್ಚು ಹಾಕಿದನು. ಮುಖಪುಟದ ಮೇಲಿನ ಶಿರೋನಾಮವು "A Million Thanks" ಎಂದಿತ್ತು. "Thanks" ಎಂಬ

ಪದದ ಒಳಗೆ "one million times" (ಒಂದು ಮಿಲಿಯ ಸಲ) ಎಂದು ಅಚ್ಚಾಗಿತ್ತು. ನಮಗೆ ಸಹಾಯ ಮಾಡಿದವರಿಗಾಗಿಯೂ ನಮ್ಮನ್ನು ಪ್ರೋತ್ಸಾಹಿಸಿದವರಿಗಾಗಿಯೂ ಹೇಳುವದಕ್ಕಾಗಿ ಮಿಲಿಯನ್‌ಕ್ಕಿಂತಲೂ ಹೆಚ್ಚು ಉಪಕಾರಗಳು ನಮ್ಮಲ್ಲಿ ಅನೇಕರಿಗೆ ಅವಶ್ಯವಾಗಿವೆ.

Geraldine Searfoss ಎಂಬವರು "Say So" ಎಂಬ ತಲೆಬರಹದಿಂದ ಈ ಸಾಲುಗಳನ್ನು ಬರೆದನು:

ನೆರೆಯವನು ಅಲ್ಪ ಸಹಾಯ ಮಾಡಿದನೋ,
ನಿನ್ನ ಭಾರ ಹಗುರವಾಗಿ ಮಾಡಲು
ನಿನ್ನ ಮಾರ್ಗದಲ್ಲಿ ಹೋಗುವವರೆಗೆ ಸಹಾಯ ಮಾಡಿದನೋ?
ಹಾಗಾದರೆ ಹಾಗೆಂದು ಅವನಿಗೆ ನೀನೇಕೆ ಹೇಳ ಬಾರದು!
ನಿನ್ನ ಹಳೇ ಮಿತ್ರ ದುಃಖ ಹಂಚಿಕೊಳ್ಳುವನೋ
ನಿನ್ನ ದುಃಖ ಸಂಕಟದ ಆಳದಿಂದ ನಿನ್ನನ್ನು ಕೈಹಿಡಿದು ಮೇಲಕ್ಕೆ ಎತ್ತುವನೋ,
ಹಾಗಾದರೆ ಹಾಗೆಂದು ಅವನಿಗೆ ನಿನೇಕೆ ಹೇಳಬಾರದು!

ನಿನಗೆ ಇಲ್ಲಿ ಅನೇಕ ಆಶೀರ್ವಾದಗಳನ್ನು
ನಿನ್ನ ಪರಲೋಕದ ತಂದೆಯು ಕೊಟ್ಟಿರುವನೋ,
ಹಾಗಾದರೆ ಆತನ ಮುಂದೆ ಮೊಣಕಾಲೂರಿ,
ಯಥಾರ್ಥವಾಗಿ, ಸಂತೋಷದಿಂದ ಹಾಗೆ ಆತನಿಗೆ ಹೇಳು![13]

ಸ್ವಯಂ ಪರೀಕ್ಷೆಯ ಅತೀ ಮಹತ್ವದ ಭಾಗಕ್ಕೆ ಇದು ನಮ್ಮನ್ನು ತರುತ್ತದೆ: ನಾವು ಇರಬೇಕಾದಷ್ಟು ದೇವರಿಗೆ ಕೃತಜ್ಞರಾಗಿರುವೆವೋ? ನಿಶ್ಚಯವಾಗಿಯೂ ದೇವರಿಗೆ ಎಲ್ಲಾ ಆಶೀರ್ವಾದಗಳಿಗಾಗಿಯೂ "ನಿನಗೆ ಉಪಕಾರ" ಎಂದು ಹೇಳುವದರಲ್ಲಿ ಬಹಳ ದುಃಖಕರವಾಗಿ ಸೋತು ಹೋಗುತ್ತೇವೆ. "ನನ್ನ ಮನವೇ, ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯ ಬೇಡ" (ಕೀರ್ತನೆ 103:2) ಎಂದು ಕೀರ್ತನಕಾರನು ಹೇಳುತ್ತಾನೆ. ಕೀರ್ತನಕಾರನು ಹೇಳುವ ಉಪಕಾರಗಳು ಯಾವವು? ಮತ್ತಾಯ 5:45ರಿಂದ ಸೂಚಿಸಲ್ಪಟ್ಟದ್ದರೊಂದಿಗೆ ಪ್ರಾರಂಭಿಸೋಣ: "ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ." ನಮಗೆ ಬಿಸಿಲು ಹಾಗೂ ಮಳೆ, ಸೂರ್ಯ, ಚಂದ್ರ, ನಕ್ಷತ್ರಗಳು, ಮರಗಳೂ ಪಕ್ಷಿಗಳೂ ಸೇಬು ಹಣ್ಣುಗಳೂ ಮೊಟ್ಟೆಗಳು ಇತ್ಯಾದಿಗಳು ನಮಗಿವೆ. ನಮಗೆ ದೈನಂದಿನ ಸಂಗತಿಗಳೂ ಇವೆ.

ಇವಲ್ಲದೇ, ಯೇಸು ಸಮಾರ್ಯದವನಿಗೆ ಕೊಟ್ಟ ವಿಶೇಷ ಆಶೀರ್ವಾದದಂತೆ ಎಂಥಾ ವಿಶೇಷವಾದ ಉಪಕಾರಗಳು ನಮಗಿವೆ. "ಆತನು ನಿಮಗೋಸ್ಕರವಾಗಿ ಮಾಡಿದ ಮಹತ್ಕಾರ್ಯಗಳನ್ನು ನೆನಸಿಕೊಳ್ಳಿರಿ" (1 ಸಮುವೇಲ 12:24). ನೀನು ಯಾವಾಗಲಾದರೂ ಅನಾರೋಗ್ಯದಿಂದ ಇದ್ದು ಸ್ವಸ್ಥರಾಗಿದ್ದೀರೋ?[14] ನೀವು ಕ್ರೈಸ್ತ ಕುಟುಂಬದಲ್ಲಿ ಬೆಳಸಲ್ಪಟ್ಟಿದ್ದೀರೋ? ಸುವಾರ್ತೆಯನ್ನು ಕೇಳುವ, ತಿಳಿಯುವ ಹಾಗೂ ವಿಧೇಯರಾಗುವ ಅವಕಾಶ ನಿಮಗೆ ಇತ್ತೋ? ನೀವು ಕ್ರೈಸ್ತ ಶಿಕ್ಷಣ ಹೊಂದಿರುವಿರೋ? ಕರ್ತನನ್ನು ಪ್ರೀತಿಸುವ ಸಂಗಾತಿಯನ್ನು ಹೊಂದಿರುವಿರೋ? ಕರ್ತನು ನಿಮಗೆ ಮಕ್ಕಳನ್ನು ಕೊಟ್ಟಿರುವನೋ? ದೇವರ ಮಹಾ ಭಕ್ತರನ್ನು ತಿಳಿದು ಕೊಳ್ಳುವ ಅವಕಾಶ

ವಿದೆಯೋ? ನಮ್ಮ ಆಶೀರ್ವಾದಗಳನ್ನು ಲೆಕ್ಕ ಹಾಕುವುದು ಕಠಿಣಕರವಾದ ಗಣಿತ ಶಾಸ್ತ್ರವಾಗಿದೆ ಯೆಂದು ಯಾರೋ ಒಬ್ಬರು ಹೇಳಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ, "ವರ್ಣಿಸಲಶಕ್ಯವಾದ ದೇವರ ವರ" (2 ಕೊರಿಂಥ. 9:15) ಎಂದು ಪೌಲನು ಕರೆಯುವ ಯೇಸುವಿನ ವರಕ್ಕಾಗಿ ನಾವು ಕೃತಜ್ಞತೆ ಯುಳ್ಳವರಾಗಿರಬೇಕು. ದ್ವಿತೀಯ ಜಾಗತಿಕ ಮಹಾ ಯುದ್ಧದಲ್ಲಿ ಇಂಗ್ಲಂಡನ್ನು ಕಾಪಾಡಿದ ರೊಯಲ್ ಏರ್ ಫೋರ್ಸಿನ ಯುವಕರಿಗೆ ವಿನ್‌ಸ್ಟನ್ ಚರ್ಚಿಲ್ ಗೌರವ ಸಲ್ಲಿಸಿದಾಗ ಹೀಗೆ ಹೇಳಿದನು: "ಮಾನವ ಚರಿತ್ರೆಯಲ್ಲಿ ಕೆಲವೇ ಜನರಿಗೆ ಅನೇಕರು ಬಹಳವಾದಷ್ಟನ್ನು ಕೊಡಬೇಕಾಗಿತ್ತು." ಈ ಮಾತುಗಳು ಯೇಸುವಿನ ಬಗ್ಗೆ ಹೆಚ್ಚು ಸತ್ಯವಾದವುಗಳಾಗಿವೆ. "ವಿಶ್ವದ ಚರಿತ್ರೆಯಲ್ಲಿ ಅನೇಕರು ಒಬ್ಬಾತನಿಗೆ ಬಹಳಷ್ಟು ಕೊಡಬೇಕಾಗಿರುವುದು."

ಕರ್ತನು ನಮಗಾಗಿ ಮಾಡಿದ ಎಲ್ಲವುಗಳಿಗಾಗಿ ನಾವೆಷ್ಟು ಕೃತಜ್ಞರಾಗಿರಬೇಕು? ನಾವು ಕೃತಜ್ಞತೆಯುಳ್ಳವರಾಗಿದ್ದರೆ, ನಮ್ಮ ಕೃತಜ್ಞತೆಯನ್ನು ಹೇಗೆ ಪ್ರಕಟಿಸಬೇಕು? ಕರ್ತನ ಮೇಜಿನ ಸುತ್ತ ಕೂಡಿಬರುವಾಗ, "ಒಂಭತ್ತು ಜನರು - ಅವರೆಲ್ಲಿದ್ದಾರೆ"? ಕಾಣಿಕೆ ತಟ್ಟೆ ದಾಟಿ ಹೋಗುತ್ತಿರುವಾಗ "ಒಂಭತ್ತು ಜನರು - ಅವರೆಲ್ಲಿದ್ದಾರೆ?" ಭಾನುವಾರ ಹಾಗೂ ಬುಧವಾರ ಕರ್ತನಿಗೆ ಸ್ತೋತ್ರ ಮಾಡಲು ಕೂಡಿ ಬರುವಾಗ, "ಒಂಭತ್ತು ಜನರು - ಅವರೆಲ್ಲಿದ್ದಾರೆ?" ಮಹಾ ಆಶೀರ್ವಾದವನ್ನು, ರಕ್ಷಣೆಯ ಆಶೀರ್ವಾದವನ್ನು ಹಂಚುವ ಸಂದರ್ಶನ ಹಾಗೂ ಸುವಾರ್ತಾ ಸೇವೆಯ ಸಮಯ ಬಂದಾಗ - "ಒಂಭತ್ತು ಜನರು - ಅವರೆಲ್ಲಿದ್ದಾರೆ?"

ದೇವರು ನಿಮಗೆ ಮಾಡಿದ ಎಲ್ಲವುಗಳನ್ನು ಯೋಚಿಸುತ್ತ ಸ್ವಲ್ಪ ಸಮಯಗಳನ್ನು ಕಳೆಯಿರಿ. ಆಮೇಲೆ ಆತನಿಗೆ ಕೃತಜ್ಞತೆ ಸಲ್ಲಿಸಿರಿ. "ಒಂಭತ್ತು ಜನರು - ಅವರೆಲ್ಲಿದ್ದಾರೆ?" ಎಂದು ಪ್ರಶ್ನೆ ಕೇಳುತ್ತ ಭಾರವಾದ ಹೃದಯದೊಂದಿಗೆ ಹೋಗುವಂತೆ ಆತನನ್ನು ಬಿಡಬೇಡಿರಿ.

## ಮುಕ್ತಾಯ

ನಿಮ್ಮ ಕೃತಜ್ಞತೆಗಳನ್ನು ಪ್ರಕಟಿಸುವ ವ್ಯವಹಾರಿಕ ಮಾರ್ಗಗಳಲ್ಲಿ ಒಂದು ಆತನು ನಿಮಗೆ ಆಜ್ಞಾಪಿಸಿದ್ದನ್ನು ಮಾಡುವುದು. ನೀವು ದೀಕ್ಷಾಸ್ನಾನ ಹೊಂದುವ ಅವಶ್ಯಕತೆಯಿದ್ದರೆ ಇಲ್ಲವೇ ದೇವರ ಮಗುವಾಗಿ ಪುನಃ ಸ್ಥಾಪಿಸಲ್ಪಡ ಬೇಕಾಗಿದ್ದರೆ - ಆ ಅಗತ್ಯತೆಯನ್ನು ಕೂಡಲೇ ಯಾಕೆ ಪೂರೈಸಬಾರದು? ಕರ್ತನು ನಿಮಗೆ ಮಾಡಿದ್ದನ್ನು ನೀವು ಮೆಚ್ಚಿ ಕೊಂಡರೆ, ನೀವು ಕಾದು ಕೊಂಡಿರಲಾರಿರಿ ಇಲ್ಲವೇ ಹಿಂಜರಿಯಲಾರಿರಿ.

---

ಟಿಪ್ಪಣಿಗಳು

[1]ಲೂಕ 9:51; 13:22. [2]ಯಾಜಕಕಾಂಡ 13:46; ಅರಣ್ಯಕಾಂಡ 5:2, 3. [3]ಯೋಹಾನ 4:9. [4]"ಕುಷ್ಠರೋಗ" ಎಂದು ಸತ್ಯವೇದದಲ್ಲಿ ಉಪಯೋಗಿಸಿದ್ದು ನಮ್ಮ ದಿನಗಳಲ್ಲಿ ಉಪ ಯೋಗಿಸುವಂಥದ್ದಕ್ಕಿಂತ ಹೆಚ್ಚು ವಿಶಾಲವಾದ ಅರ್ಥದಲ್ಲಿರುವುದೆಂದು ನಾನು ತಿಳಿಯುತ್ತೇನೆ. [5]ನಿಮ್ಮ ಕೇಳುಗರು ಅರ್ಥಮಾಡಿಕೊಳ್ಳುವ ಹೋಲಿಕೆಯನ್ನು ಉಪಯೋಗಿಸಿರಿ. [6]ಯಾಜಕಕಾಂಡ 14:2 ಇತ್ಯಾದಿ. [7]ಒಂದು ಪುರಾತನ ಕೈಬರಹದ ಪ್ರತಿಯು ಯೇಸು ಅವರನ್ನು ಸ್ಥಳದಲ್ಲಿಯೇ

ಗುಣಪಡಿಸಿದ ನೆಂದು ಹೇಳುತ್ತದೆ. ಆದರೆ ಹೆಚ್ಚಾದವುಗಳು ಹಾಗೆ ಹೇಳುವದಿಲ್ಲ. ಯೇಸುವಿನ ಅದ್ಭುತಗಳ ಸುತ್ತಲಿರುವ ಪರಿಸ್ಥಿತಿಗಳನ್ನು ಗಮನಿಸುವುದು ರೋಮಾಂಚನ ಕರವಾದದ್ದಾಗಿರುವುದು. ಇದರ ಮೇಲೆ ಬರ್ಟನ್ ಕೊಫ್‌ಮನ್ ಅವರ ಒಂದು ಒಳ್ಳೆ ಭಾಗವಿದೆ: "ಯೇಸುವಿನ ಅದ್ಭುತಗಳಲ್ಲಿಯ ಆಶ್ಚರ್ಯಕರವಾದ ವಿವಿಧತೆಯು ಅವುಗಳ ದೈವೀಯ ಮೂಲದ ಗುರುತಾಗಿದೆ" ಎಂದು ಹೇಳಿದ್ದಾನೆ (*Commentary on Luke* [Abilene, Tex.: A.C.U. Press, 1975], 340). [8]ವ. 19ರಲ್ಲಿ "ನಿನ್ನ ನಂಬಿಕೆಯು ನಿನ್ನನ್ನು ಸ್ವಸ್ಥಮಾಡಿಯದೆ" ಎಂದು ಯೇಸು ಸಮಾರ್ಯದ ವನಿಗೆ ಹೇಳಿದನು. [9]ಸಮಾರ್ಯದವರು ಹಳೆ ಒಡಂಬಡಿಕೆಯಲ್ಲಿಯ ಮೊದಲ ಐದು ಪುಸ್ತಕಗಳಲ್ಲಿ ನಂಬಿಕೆಯಿಟ್ಟಿದ್ದರು. ಅವುಗಳಲ್ಲಿ ಕುಷ್ಠರೋಗದ ಬಗ್ಗೆ ನಿಯಮಗಳಿವೆ. [10]Coffman, 341.

[11]NASBಯಲ್ಲಿ "ಇಲ್ಲವೇ, ನಿನ್ನನ್ನು ರಕ್ಷಿಸಿದೆ" ಎಂಬ ಅಡಿ ಟಿಪ್ಪಣೆಯಿದೆ. [12]"ಕೃತಜ್ಞತೆಯು ವಿಶ್ವಾಸವನ್ನು ಪೂರ್ತಿಗೊಳಿಸುತ್ತದೆ" ಎಂಬುದು ಒಂದು ಪುರಾತನ ಹೇಳಿಕೆ. [13]Quoted by Eleanor Doan in *The Speaker's Sourcebook* (Grand Rapids, Mich.: Zondervan Publishing House, 1962), 262. [14]ಕೇಳುಗರಿಗೆ ತಾವು ಹೊಂದಿದ "ವಿಶೇಷ" ಆಶೀರ್ವಾದಗಳನ್ನು ಯಾದಿ ಮಾಡಬೇಕೆಂದು ಹೇಳಬಹುದು. ಅವರ ಯಾದಿಯು ಪಾಠದಲ್ಲಿರುವದಕ್ಕಿಂತ ಭಿನ್ನವಾಗಿರಬಹುದು.

© 2009 Truth for Today